# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** 1) ಶ್ರೀ ಡಿ.ಕೆ.ಕೃಷ್ಣಮೂರ್ತಿ ಬಿನ್ ಕೃಷ್ಣಶೆಟ್ಟಿ (ನಿವೃತ್ತಿ ಪಿ.ಡಿ.ಓ) 2) ಶ್ರೀ ಎಸ್.ಯೋಗೇಶ್ ಬಿನ್ ಲೇಟ್॥ಸತ್ತೇಗೌಡ 3) ಶ್ರೀ ಎಂ.ವಿ.ವೆಂಕಟೇಶ್ ಬಿನ್ ಲೇಟ್॥ವೆಂಕಟಪ್ಪ ಪಿಡಿಓ 4) ಶ್ರೀ ಎ.ಎಸ್.ಸಿದ್ಧರಾಜು ಬಿನ್ ಲೇಟ್॥ಸಿದ್ದೇಗೌಡ ಪಿಡಿಓ. 5) ಡಾ. ಶ್ರೀ ಟಿ.ನರಸಿಂಹರಾಜು, ಪಿಡಿಓ ಬಳ್ಳೇಕೆರೆ ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿ ಹಾಗೂ 214(2)(ಬಿ) ರಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅಸಪ ಸಂಖ್ಯೆ:

D.O.NO.Compt/UPLOK/MYS-804/2015/DRE-2, dated:08.03.2017

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 09.02.2017 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

ಶ್ರೀಮತಿ ನಾಗಮಣಿ ಕೋಂ ಲೇಟ್॥ ಮುನೇಗೌಡ, ಕಾಮನಹಳ್ಳಿ ಅಂಚೆ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ರವರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪುತ್ತಾರೆ) ತಮ್ಮ ದೂರಿನಲ್ಲಿ ಶ್ರೀ ಶ್ರೀಕಂಠಚಾರ್ ಬಿನ್ ಕಾಳಾಚಾರಿ ರವರು ಅವರ ಮನೆ ಪಕ್ಕ ಮನೆ ಕಟ್ಟಿಸಿದ್ದು 3ಅಡಿ ಒತ್ತುವರಿ ಮಾಡಿಕೊಂಡಿರುತ್ತಾರೆ ಹಾಗೂ ವಿದ್ಯಾತ್ ಕಂಬವನ್ನು ತಮ್ಮ ಕಂಪೌಂಡ್ ಒಳಕ್ಕೆ ಸೇರಿಸಿಕೊಂಡಿರುತ್ತಾರೆ ಇದರಿಂಧ ಅವರ ಮನೆಗೆ ದಾರಿ ಇಲ್ಲದಂತಾಗಿದೆ. ಈ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿರುವುದಿಲ್ಲವೆಂದು ಆರೋಪಿಸಿರುತ್ತಾರೆ. 1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಬಳ್ಳೇಕೆರೆ ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು ಶ್ರೀ ಶ್ರೀಕಂಠಚಾರ್ ಬಿನ್ ಕಾಳಾಚಾರಿ, ಕಾಮನಹಳ್ಳಿ ಬಳ್ಳೇಕೆರೆ ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿರುತ್ತಾರೆ.

**ದೂರಿನ ಸಂಕ್ಷಿಪ್ತ ವಿವರಣೆ:**– ಎದುರುದಾರರ ವಿರುದ್ಧ ದೂರುದಾರರು ತಮ್ಮ ದೂರಿನಲ್ಲಿ, ಶ್ರೀ ಶ್ರೀಕಂಠಚಾರ್ ಬಿನ್ ಕಾಳಾಚಾರಿ ರವರು ಶ್ರೀಮತಿ ನಾಗಮಣಿ ಕೋಂ ಲೇಟ್॥ ಮುನೇಗೌಡ ರವರ ಮನೆ ಪಕ್ಕ ಮನೆ ಕಟ್ಟಿಸಿದ್ದು 3ಅಡಿ ಒತ್ತುವರಿ ಮಾಡಿಕೊಂಡಿರುತ್ತಾರೆ ಹಾಗೂ ವಿದ್ಯಾತ್ ಕಂಬವನ್ನು ತಮ್ಮ ಕಂಪೌಂಡ್ ಒಳಕ್ಕೆ ಸೇರಿಸಿಕೊಂಡಿರುತ್ತಾರೆ ಇದರಿಂದ ಅವರ ಮನೆಗೆ ದಾರಿ ಇಲ್ಲದಂತಾಗಿದೆಯೆಂದು ದೂರುದಾರರು ತಮ್ಮ ದೂರಿನಲ್ಲಿ ಹೇಳಿದ್ದಾರೆ.

ದೂರಿನ ಬಗ್ಗೆ ವರದಿ ಸಲ್ಲಿಸುವಂತೆ ಸಹಾಯಕ ಕಾರ್ಯಪಾಲ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ (ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರನ್ನು ಕೇಳಲಾಗಿ ಸದರಿಯವರು ತಮ್ಮ ವರದಿಯಲ್ಲಿ ಕೆಳಗಿನಂತೆ ತಮ್ಮ ವರದಿಯನ್ನು ನೀಡಿರುತ್ತಾರೆ.

- 2ನೇ ಎದುರುದಾರರಾದ ಶ್ರೀ ಶ್ರೀಕಂಠಾಚಾರಿಯವರು ಅವರ ನಿವೇಶನದ ಪಶ್ಚಿಮಕ್ಕೆ ಇರುವ ಗಲ್ಲಿಯನ್ನು ಒತ್ತುವರಿ ಮಾಡಿಕೊಂಡು ಗಲ್ಲಿಗೆ ಜಾಗ ಬಿಡದೆ ನಂತರದ ಶ್ರೀ ಲಕ್ಷ್ಮಮ್ಮ ಲೇಟ್ ಕೃಷ್ಣಶೆಟ್ಟಿ ರವರ ಮನೆಯತನಕ ಕಾಂಪೌಂಡ್ ಕಟ್ಟಿದ್ದು, ಇದರಿಂದಾಗಿ ವಿದ್ಯುತ್ ದೀಪವು ಕಾಂಪೌಂಡ್ ಒಳಗಡೆ ಬಂದಿರುವುದು ತನಿಖೆಯಲ್ಲಿ ಸಾಬೀತಾಗಿದ್ದು, ಈ ಬಗ್ಗೆ 3 ರಿಂದ 7ನೇ ಎದುರುದಾರರುಗಳು ಕಾನೂನು ರೀತ್ಯಾ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

- 3 ರಿಂದ 7ನೇ ಎದುರುದಾರರುಗಳು, 2ನೇ ಎದುರುದಾರರು ಹಾಗೂ ದೂರುದಾರರ ಮನೆಗಳಲ್ಲದೇ ಸದರಿ ವಿವಾದಿತ ರಸ್ತೆಯಲ್ಲಿ ಬರುವ ಮನೆಗಳ ಅಳತೆಗೊಳಿಸಿ ಸೂಕ್ತ ಕ್ರಮವನ್ನು ಈಗಾಗಲೇ ಕೈಗೊಳ್ಳಬೇಕಾಗಿತ್ತು. ಆದರೆ, ಈವರೆವಿಗೆ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೇ 3 ರಿಂದ 7ನೇ ಎದುರುದಾರರುಗಳು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- ದೂರುದಾರರ ಮನೆಯ ಅಳತೆಗಳು 1999 ರಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ನೀಡಲಾಗಿರುವ ಪಟ್ಟಿಯಲ್ಲಿನ ಅಳತೆಗಳಿಗೂ ಹಾಲಿ ಇರುವ ಅಳತೆಗಳಿಗೂ ಬಹಳ ವ್ಯತ್ಯಾಸವಿದ್ದು, ಈ ವ್ಯತ್ಯಾಸದ ಬಗ್ಗೆ 3 ರಿಂದ 7ನೇ ಎದುರುದಾರರುಗಳು ಸರ್ಕಾರಿ ಸರ್ವೆಯರ್‌ನಿಂದ ಅಳತೆ ಮಾಡಿಸಿ, ಅನಧೀಕೃತ ಒತ್ತುವರಿಯನ್ನು ತೆರವುಗೊಳಿಸಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ, 1)ಶ್ರೀ ಡಿ.ಕೆ.ಕೃಷ್ಣಮೂರ್ತಿ ಬಿನ್ ಕೃಷ್ಣಶೆಟ್ಟಿ (ನಿವೃತ್ತಿ ಪಿ.ಡಿ.ಓ) 2)ಶ್ರೀ ಎಸ್.ಯೋಗೇಶ್ ಬಿನ್ ಲೇಟ್॥ಸತ್ತೇಗೌಡ ಪಿಡಿಓ 3) ಶ್ರೀ ಎಂ.ವಿ.ವೆಂಕಟೇಶ್ ಬಿನ್ ಲೇಟ್॥ವೆಂಕಟಪ್ಪ ಪಿಡಿಓ 4)ಶ್ರೀ ಎ.ಎಸ್.ಸಿದ್ಧರಾಜು ಬಿನ್ ಲೇಟ್॥ಸಿದ್ದೇಗೌಡ ಪಿಡಿಓ 5) ಡಾ. ಶ್ರೀ ಟಿ.ನರಸಿಂಹರಾಜು, ಪಿಡಿಓ ಬಳ್ಳೇಕೆರೆ ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಇವರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಾಮಗಳು 1996 ರ ನಿಯಮ 3(1)(ii) ಮತ್ತು (iii) ರ ಅಡಿಯಲ್ಲಿ ದುರ್ನಡತೆ/ದುರ್ವತನೆ ಕಂಡು ಬಂದಿರುವುದರಿಂದ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಬಹುದಾಗಿರುತ್ತದೆ ಹಾಗೂ 1)ಶ್ರೀ ಡಿ.ಕೆ.ಕೃಷ್ಣಮೂರ್ತಿ ಬಿನ್ ಕೃಷ್ಣಶೆಟ್ಟಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ), ಇವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957ರ ನಿಯಮ 214(2)(ಬಿ)(ii) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ದೂರುದಾರರು ದೂರು ಹಾಗೂ ತನಿಖಾಧಿಕಾರಿಗಳ ವರದಿ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ 3 ರಿಂದ 7ನೇ ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, 3 ರಿಂದ 7ನೇ ಎದುರುದಾರರುಗಳು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವನ್ನು ಉಲ್ಲಂಘಿಸಿ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ.

ಮೇಲ್ಕಂಡ ಅಂಶಗಳು, ಕಡತದಲ್ಲಿನ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಾಮಗಳು 3(1) (i) ಮತ್ತು (ii)ರಡಿಯಲ್ಲಿ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ 1)ಶ್ರೀ ಎಸ್.ಯೋಗೇಶ್ ಬಿನ್ ಲೇಟ್॥ಸತ್ತೇಗೌಡ ಪಿಡಿಓ 2) ಶ್ರೀ ಎಂ.ವಿ.ವೆಂಕಟೇಶ್ ಬಿನ್ ಲೇಟ್॥ವೆಂಕಟಪ್ಪ ಪಿಡಿಓ 3)ಶ್ರೀ ಎ.ಎಸ್.ಸಿದ್ಧರಾಜು ಬಿನ್ ಲೇಟ್॥ಸಿದ್ದೇಗೌಡ ಪಿಡಿಓ 4) ಡಾ. ಶ್ರೀ ಟಿ.ನರಸಿಂಹರಾಜು, ಪಿಡಿಓ ಬಳ್ಳೇಕೆರೆ ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಹಾಗೂ 1)ಶ್ರೀ ಡಿ.ಕೆ.ಕೃಷ್ಣಮೂರ್ತಿ ಬಿನ್ ಕೃಷ್ಣಶೆಟ್ಟಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ), ಇವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ 214(2)(ಬಿ)(ii) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ಪ್ರಕರಣವನ್ನು ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/255/ಗ್ರಾಪಂಅ/2017

ಬೆಂಗಳೂರು, ದಿನಾಂಕ:16-11-2018.

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ 1) ಶ್ರೀ ಎಸ್.ಯೋಗೇಶ್ ಬಿನ್ ಲೇಟ್॥ಸತ್ತೇಗೌಡ, ಪಿಡಿಓ 2) ಶ್ರೀ ಎಂ.ವಿ.ವೆಂಕಟೇಶ್ ಬಿನ್ ಲೇಟ್॥ವೆಂಕಟಪ್ಪ ಪಿಡಿಓ 3) ಶ್ರೀ ಎ.ಎಸ್.ಸಿದ್ಧರಾಜು ಬಿನ್ ಲೇಟ್॥ಸಿದ್ದೇಗೌಡ ಪಿಡಿಓ 4) ಡಾ. ಶ್ರೀ ಟಿ.ನರಸಿಂಹರಾಜು, ಪಿಡಿಓ ಬಳ್ಳೇಕೆರೆ ಗ್ರಾಮ ಪಂಚಾಯಿತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಬಹುದಾಗಿರುತ್ತದೆ ಹಾಗೂ 1)ಶ್ರೀ ಡಿ.ಕೆ.ಕೃಷ್ಣಮೂರ್ತಿ ಬಿನ್ ಕೃಷ್ಣಶೆಟ್ಟಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ), ಇವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ 214(2)(ಬ)(ii) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

16/11

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. ಪುಟ ಸಂಖ್ಯೆ: 1 ರಿಂದ 200).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮಂಡ್ಯ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಕೆ.ಆರ್ ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
6. ಶ್ರೀ ಡಿ.ಕೆ.ಕೃಷ್ಣಮೂರ್ತಿ ಬಿನ್ ಕೃಷ್ಣಶೆಟ್ಟಿ (ನಿವೃತ್ತಿ ಪಿ.ಡಿ.ಓ) ಬಳ್ಳೇಕೆರೆ ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
7. ಶ್ರೀ ಎಸ್.ಯೋಗೇಶ್ ಬಿನ್ ಲೇಟ್॥ಸತ್ತೇಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಳ್ಳೇಕೆರೆ ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
8. ಶ್ರೀ ಎಂ.ವಿ.ವೆಂಕಟೇಶ್ ಬಿನ್ ಲೇಟ್॥ವೆಂಕಟಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಳ್ಳೇಕೆರೆ ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
9. ಶ್ರೀ ಎ.ಎಸ್.ಸಿದ್ಧರಾಜು ಬಿನ್ ಲೇಟ್॥ಸಿದ್ದೇಗೌಡ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಳ್ಳೇಕೆರೆ ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
10. ಡಾ. ಶ್ರೀ ಟಿ.ನರಸಿಂಹರಾಜು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಳ್ಳೇಕೆರೆ ಗ್ರಾಮ ಪಂಚಾಯತಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
12. ಗಣಕ ಕೋಶ.